ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

**ಸಿ.ಸಿ. ನಂ. 263/2024 ಸಿ. ಡಬ್ಲ್ಯೂ: 5 ಪಿ ಡಬ್ಲ್ಯೂ ಃ 7**

ಸಾಕ್ಷಿಯ ಹೆಸರು ಃ ಯಲ್ಲಪ್ಪ ಗಾಣೇಗರ

ತಂದೆಯ ಹೆಸರು ಃ ಮಲ್ಲಿಕಾರ್ಜುನ

ವಯಸ್ಸು ಃ 54 ವರ್ಷ

ಉದ್ಯೋಗ ಃ ಒಕ್ಕಲುತನ.

ವಾಸಸ್ಥಳ ಃ ಅಸೂಂಡಿ, ಸವದತ್ತಿ ತಾಲೂಕ.

ದಿನಾಂಕಃ 15/04/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದ

1. ಚಾಸಾ 1, 4, 6 ರಿಂದ 8 ರ ಪರಿಚಯವಿಲ್ಲ. ಆರೋಪಿ ಬಸ್ಸನ ಚಾಲಕ. ಈ ಕೇಸಿನ ಬಗ್ಗೆ ನನಗೆ ಏನು ಗೊತ್ತಿಲ್ಲ. ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ದೂರು ಯಾರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ.

( ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿದಂತೆ ನೀಡಲಾಯಿತು).

ಪಾಟೀ ಸವಾಲು: ಮಾನ್ಯ ಸಸಅ ರವರಿಂದ

2. ದಿಃ 24/10/2023 ರಂದು ಮಃ 02-00 ಗಂಟೆಗೆ ರಾಣೆಬೆನ್ನೂರಿನಿಂದ ಕೆ ಎಸ್ ಆರ್ ಟಿ ಸಿ ಬಸ್ಸ ನಂಬರ ಕೆಎ-27-ಎಫ್-664 ರಲ್ಲಿ ನಾನು ಹುಬ್ಬಳ್ಳಿ ಕಡೆಗೆ ಬರುತ್ತಿದ್ದು, ಸದರಿ ಬಸ್ಸನಲ್ಲಿ ಅಂದಾಜು 30-35 ಜನ ಪ್ರಯಾಣಿಸುತ್ತಿದ್ದು, ಎನ್ ಎಚ್ 4 ರಲ್ಲಿ ಚಾಲಕನು ವೇಗವಾಗಿ ಬಸ್ಸನ್ನು ಚಲಾಯಿಸಿಕೊಂಡು ಬಂದು ಬೆಳ್ಳಿಗಟ್ಟಿ ಗ್ರಾಮದ ಹತ್ತಿರ ಕಾಡಪ್ಪ ಮೈಸೂರ ಇವರ ಫಾರಂ ಹೌಸ್ ಹತ್ತಿರ ಮುಂದೆ ಹೋದ ಲಾರಿ ನಂಬರ ಟಿಎನ್-88-ಡಿ-9437 ನ್ನು ಓವರ್ ಟೇಕ್ ಮಾಡಲು ಹೋಗಿ ವಾಹನದ ನಿಯಂತ್ರಣ ಮಾಡಲಾಗದೇ ಲಾರಿಗೆ ಗುದ್ದಿ ಡಿಕ್ಕಿ ಪಡಿಸಿ ಸರ್ವೀಸ್ ರಸ್ತೆಯ ಆಚೆ ಇರುವ ಫಾರಂ ಹೌಸ್ ಕಾಂಪೌಂಡಗೆ ಗುದ್ದಿದ್ದು ಬಸ್ಸನಲ್ಲಿದ್ದ ನನಗೆ ಬಲ ಕೈಗೆ ಮತ್ತು ಎದೆಗೆ ಗಾಯಗಳಾಗಿತ್ತು. ಚಾಸಾ 1 ರ ತಲೆಗೆ, ಹಣೆಗೆ ಮತ್ತು ಎಡಗಾಗಲಿಗೆ ಗಾಯವಾಗಿತ್ತು. ಬಸ್ ಚಾಲಕನ ಹೆಸರು ಮಹಾಂತೇಶ ತಂದೆ ಭೀಮಪ್ಪ ಮಾದರ ಇದ್ದು, ಪ್ರಯಾಣಿಕರಾದ ನನಗೂ ಗಾಯಗಳಾಗಿದ್ದವು. ಲಾರಿ ಚಾಲಕನ ಹೆಸರು ಜಯಾಸಿಂಗ್ ಜೋಬು ಇದ್ದು, ಆತನಿಗೆ ಯಾವುದೇ

ಗಾಯಗಳಾಗಿರಲಿಲ್ಲ. ನಂತರ ನಮ್ಮನ್ನು 108 ಅಂಬುಲೆನ್ಸನಲ್ಲಿ ಹುಬ್ಬಳ್ಳಿಗೆ ಚಿಕಿತ್ಸೆಗೆ ದಾಖಲಿಸಿದ್ದು, ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಚಾಸಾ 1 ಪೋಲೀಸರಿಗೆ ದೂರು ಕೊಟ್ಟಿದ್ದಾರೆ ಎಂದು ನಿಪಿ. 11 ರಂತೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ</u> **(**ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.)

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.